# ನಗರಸಭಾ ಕಾರ್ಯಾಲಯ, ಮಂಡ್ಯ.

ಸಂಖ್ಯೆ:ನಸಮಂ/ಸಭೆ/10/2009–10 ದಿನಾಂಕ:16–10–2009.

## ತುರ್ತು ವಿಶೇಷ ಸಭೆ ನಡವಳಿಕೆ

**ದಿನಂಕ:16–10–2009 ರಂದು ಶುಕ್ರವಾರ ಮಧ್ಯಾಹ್ನ** 12–30 ಗಂಟೆಗೆ ಸರಿಯಾಗಿ ಮಂಡ್ಯ ನಗರಸಭಾ ಕಾರ್ಯಾಲಯದ ಶ್ರೀ ಧರಣಪ್ಪ ಸಭಾಂಗಣದಲ್ಲಿ ಮಾನ್ಯ ನಗರಸಭಾ ಅಧ್ಯಕ್ಷರವರ ಅಧ್ಯಕ್ಷತೆಯಲ್ಲಿ ನಡೆದ ತುರ್ತು ವಿಶೇಷ ಸಭೆ ನಡವಳಿಕೆಗಳು.

ಹಾಜರಿ: 30 ಗೈರು ಹಾಜರಿ:4 ಖಾಲಿ: 1 ಒಟ್ಟು:35.

ಸಭೆ ಪ್ರಾರಂಭದಲ್ಲಿ ಮಾನ್ಯ ಸದಸ್ಯರಾದ ಶ್ರೀ.ಎಂ.ಜೆ.ಚಿಕ್ಕಣ್ಣರವರ ಸೂಚನೆ ಮೇರೆಗೆ, ನೆರೆ ಹಾವಳಿಯಿಂದ ಮೃತಪಟ್ಟಿರುವವರಿಗೆ ಸಂತಾಪ ಸೂಚಿಸುವ ಸಲುವಾಗಿ ಎಲ್ಲರೂ ಎದ್ದು ನಿಂತು ಸಭೆಯಲ್ಲಿ 2 ನಿಮಿಷಗಳ ಮೌನವನ್ನು ಆಚರಿಸಲಾಯಿತು.

**ವಿಷಯ:1:–** ಮಂಡ್ಯ ನಗರಸಭೆಯ ಖಾಸಗಿ ನೈರ್ಮಲ್ಯ ಕಾಮಗಾರಿ ಗುತ್ತಿಗೆದಾರರ ಬಳಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರುಗಳು ವೇತನ ಹೆಚ್ಚಳ ಮಾಡುವಂತೆ ಒತ್ತಾಯಪಡಿಸಿ ಮಂಡ್ಯ ನಗರ ಗುತ್ತಿಗೆ ಪೌರಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘ, ಮಂಡ್ಯರವರ ನೇತೃತ್ವದಲ್ಲಿ ದಿನಾಂಕ:15–10–2009 ರಿಂದ ತಹಲ್‌ವರೆವಿಗೂ ಮಂಡ್ಯ ನಗರಸಭೆ ಕಛೇರಿ ಮುಂದೆ ಧರಣಿ ಮುಷ್ಕರ ನಡೆಸಿ ಗಲಾಟೆ ವಾತಾವರಣ ಸೃಷ್ಟಿಸಿ ಶಬ್ಧ ಮಾಲಿನ್ಯ ಮಾಡಿ ಸಾರ್ವಜನಿಕ ಉಪದ್ರವವನ್ನು ಉಂಟು ಮಾಡಿ ಸಾರ್ವಜನಿಕ ಕಛೇರಿ ಕೆಲಸ ಕಾರ್ಯಗಳಿಗೆ ಅಡಚಣೆ ಮಾಡುತ್ತಿರುವುದರ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳತಕ್ಕ ವಿಚಾರ.

**ತೀರ್ಮಾನ:1:–** ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಪೌರಾಯುಕ್ತರು ತುರ್ತು ಸಭೆ ಕರೆದಿರುವ ವಿಷಯದ ಬಗ್ಗೆ ಮಾಹಿತಿ ನೀಡಿದರು.

ನಂತರ ಸದಸ್ಯರಾದ ಶ್ರೀ.ಎಂ.ಜೆ.ಚಿಕ್ಕಣ್ಣರವರು ನಗರಸಭೆಯಲ್ಲಿ ನೈರ್ಮಲ್ಯ ಕೆಲಸ ನಿರ್ವಹಿಸುತ್ತಿರುವ ಗುತ್ತಿಗೆದಾರರು ಯಾರು? ಅವರಿಗೆ ಪಾವತಿಸುತ್ತಿರುವ ಮೊತ್ತವೆಷ್ಟು? ಎಷ್ಟು ವಿಭಾಗಗಳನ್ನು ವಹಿಸಲಾಗಿದೆ ಮತ್ತು ಅವರಲ್ಲಿ ಎಷ್ಟು ಜನರು ಕೆಲಸ ಮಾಡುತ್ತಿರುತ್ತಾರೆ. ಗುತ್ತಿಗೆದಾರರಿಗೆ ವಿಧಿಸಿರುವ ಷರತ್ತುಗಳೇನು? ಇನ್ನಿತರೆ ಮಾಹಿತಿಗಳನ್ನು ತಿಳಿಸಲು ಕೋರಿದರು. ಪರಿಸರ ಅಭಿಯಂತರರು ವಿವರಣೆ ನೀಡಿದರು.

ಸದಸ್ಯರಾದ ಶ್ರೀಮತಿ:ಕೆ.ಸಿ.ನಾಗಮ್ಮರವರು ಮಾತನಾಡಿ ಕಾರ್ಮಿಕರು ನಮ್ಮ ಹಾಗೆ ಮನುಷ್ಯರು. ಅವರು ಮಾಡುವ ಕೆಲಸ ಬಹಳ ಕಷ್ಟಕರವಾದದ್ದು. ಅವರು ನಮಗೋಸ್ಕರ ಕೆಲಸ ಮಾಡುತ್ತಿರುತ್ತಾರೆ ನಗರಸಭಾ ಅಧ್ಯಕ್ಷರು ಇದನ್ನು ಪರಿಶೀಲಿಸಿ ವೇತನ ಹೆಚ್ಚಿಸಲು ಕ್ರಮ ಕೈಗೊಳ್ಳುವ ಬಗ್ಗೆ ತಮ್ಮ ಪಾತ್ರ ವಹಿಸಬೇಕು ಹೊಸದಾಗಿ ಟೆಂಡರ್ ಕರೆಯುವುದನ್ನು ನಿಲ್ಲಿಸಬೇಕೆಂದು ಸೂಚಿಸಿದರು. ಸದಸ್ಯರಾದ ಶ್ರೀಮತಿ:ವಿ.ಎಂ.ಪದ್ಮಾವತಿರವರು ಅನುಮೋದಿಸಿದರು.

ಸದಸ್ಯರಾದ ಶ್ರೀ.ಎಂ.ಪಿ.ಅರುಣ್ ಕುಮಾರ್‌ರವರು ಮಾತನಾಡಿ ಸರ್ಕಾರಕ್ಕೆ ಈ ವಿಷಯದ ಬಗ್ಗೆ ಮತ್ತೊಮ್ಮೆ ಪ್ರಸ್ತಾವನೆ ಸಲ್ಲಿಸಿ ಅವರ ಉತ್ತರಕ್ಕಾಗಿ ಕಾಯೋಣ. ನಂತರ ಟೆಂಡರ್ ಕರೆಯಿರಿ. ಸಧ್ಯಕ್ಕೆ ಮುಷ್ಕರ ನಿರತ ಕಾರ್ಮಿಕರೊಡನೆ ಮಾತನಾಡಿ ಮೊದಲಿನಂತೆಯೇ ಗುತ್ತಿಗೆ ಕಾರ್ಮಿಕರು ಕೆಲಸ ನಿರ್ವಹಿಸಲು ಅವಕಾಶ ಕೊಡುವಂತೆ ಸೂಚಿಸಿದರು.

ಸದಸ್ಯರಾದ ಶ್ರೀ.ಎಸ್.ಪಿ.ಶ್ರೀಧರ್‌ರವರು ಮಾತನಾಡಿ ಕಾರ್ಮಿಕರಿಗೆ ವೇತನ ಹೆಚ್ಚಿಸಲು ನಮ್ಮ ಅಭ್ಯಂತರವಿಲ್ಲ. ವೇತನ ಹೆಚ್ಚಿಸುವ ಬಗ್ಗೆ ಅಗತ್ಯ ನಿರ್ಣಯ ಕೈಗೊಂಡು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದೆಂದು ಸೂಚಿಸಿದರು.

ಸದಸ್ಯರಾದ ಶ್ರೀ.ಎನ್.ನಂಜುಂಡಯ್ಯರವರು ಮಾತನಾಡಿ ದಿನಂಕ:15–10–2009ರಂದು ಕಾರ್ಮಿಕರು ಮುಷ್ಕರ ನಡೆಸುತ್ತಿದ್ದ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು, ಸ್ಥಾಯಿ ಸಮಿತಿ ಅಧ್ಯಕ್ಷರು, ಮತ್ತು ಸದಸ್ಯರುಗಳಾದ ಶ್ರೀ.ಶಂಕರೇಗೌಡರವರು, ನಾಗೇಂದ್ರರವರು ಮತ್ತು ಹಾಜರಿದ್ದ ಇತರೆ ಸದಸ್ಯರು ಮುಷ್ಕರ ನಿರತ ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡಲು ಹೋದಾಗ ಸದರಿ ಸಂಘದ ಪದಾಧಿಕಾರಿಗಳು ಚುನಾಯಿತ ಪ್ರತಿನಿಧಿಗಳು ಅಪ್ರಯೋಜಕರು ಎಂಬುದಾಗಿ ಹೀಯಾಳಿಸಿ ಮಾತನಾಡಿ ಗಲಾಟೆ ಹೆಚ್ಚಿಸಿರುತ್ತಾರೆಂದು ತಿಳಿಸಿದರು. ಮುಂದುವರೆದು ಸದಸ್ಯರಾದ ಶ್ರೀ.ಎನ್.ನಂಜುಂಡಯ್ಯರವರು, ಕೆಲವು ನಗರಸಭೆ ನೌಕರರು ಸಂಘಟನೆಗಳಿಗೆ ಬೆಂಬಲ ನೀಡಿ ನಗರಸಭೆ ವಿರುದ್ಧ ಎತ್ತಿ ಕಟ್ಟಿ ಪ್ರತಿಭಟನೆ ಮಾಡಿಸುತ್ತಿರುತ್ತಾರೆ. ಶ್ರೀ.ಕೆ.ಕುಳ್ಳೇಗೌಡರವರು ಇವರಲ್ಲಿ ಒಬ್ಬರಾಗಿರುತ್ತಾರೆ. ಇವರು ಒಬ್ಬ ಗ್ರೂಪ್–ಡಿ ನೌಕರರಾಗಿ ಕಛೇರಿಯಲ್ಲಿ ಮೇಲಧಿಕಾರಿಗಳ ಆದೇಶವನ್ನು ಲೆಕ್ಕಕ್ಕೆ ತೆಗೆದುಕೊಳ್ಳದೇ ರಾಜಕೀಯ ಮಾಡಿಕೊಂಡು ಕಛೇರಿಯ ಕಾರ್ಯ ಕಲಾಪಗಳಿಗೆ ಅಡ್ಡಿಪಡಿಸಲು ಸಂಘಟನೆಗಳನ್ನು ಪ್ರೋತ್ಸಾಹಿಸುತ್ತಿರುವುದು ಸಹ ತಿಳಿದುಬಂದಿರುತ್ತದೆ. ಇಂತಹ ನೌಕರರುಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಮತ್ತು ಸದಸ್ಯರಾದ ಶ್ರೀ.ಎನ್.ಕೆ.ಶಿವಪ್ರಕಾಶ್ ಬಾಬು ರವರು ಮಾತನಾಡಿ ನಮ್ಮ ವಾರ್ಡ್‌ನಲ್ಲಿ ಸಮರ್ಪಕವಾಗಿ ನೈರ್ಮಲ್ಯ ಕೆಲಸ ನಡೆಯುತ್ತಿಲ್ಲ. ಸಂಬಂಧಪಟ್ಟ ಹಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ.ಕೆ. ವೀರಭದ್ರಯ್ಯರವರು ಸರಿಯಾಗಿ ನೈರ್ಮಲ್ಯ ಕೆಲಸ ಮಾಡಿಸದೇ ರಾಜಕೀಯ ಮಾಡಿಕೊಂಡು ಕಾಲ ಕಳೆಯುತ್ತಿರುತ್ತಾರೆ. ಇವರನ್ನು ಸಹ ಅವರ ಮಾತೃ ಇಲಾಖೆಗೆ ಕಳುಹಿಸಲು ಸೂಚಿಸಿದರು. ಇವರ ಸೂಚನೆಯನ್ನು ಸದಸ್ಯರುಗಳಾದ ಶ್ರೀ.ಎನ್.ನಂಜುಂಡಯ್ಯರವರು ಶ್ರೀ.ಶಂಕರೇಗೌಡರವರು ಅನುಮೋದಿಸಿದರು ಹಾಗೂ ನೈರ್ಮಲ್ಯ ವಿಭಾಗದಲ್ಲಿ ಸ್ವಚ್ಛತಾ ಕೆಲಸ ಮಾಡಲು ಪೌರಕಾರ್ಮಿಕರ ಕೊರತೆ ಇರುವುದರಿಂದ ಕಛೇರಿ ಯಲ್ಲಿ ಕೆಲಸ ನಿರ್ವಹಿಸುತ್ತಿರುವ ಪೌರಕಾರ್ಮಿಕ ನೌಕರರನ್ನು ನೈರ್ಮಲ್ಯ ಶಾಖೆಗೆ ಕಳುಹಿಸುವುದೆಂದು ಸೂಚಿಸಿದರು. ಇವರ ಸೂಚನೆಯನ್ನು ಸಭೆಯು ಒಪ್ಪಲಾಯಿತು.

ಸದಸ್ಯರಾದ ಶ್ರೀ.ಕೆ.ಎಲ್.ನಾಗೇಂದ್ರರವರು ನೈರ್ಮಲ್ಯ ಕಾಮಗಾರಿಯನ್ನು ಖಾಸಗಿ ಗುತ್ತಿಗೆದಾರರಿಗೆ ನಗರಸಭೆಯಿಂದ ನಿಯಮಾನುಸಾರ ವಹಿಸಲಾಗಿದೆ. ನಗರಸಭೆ ವಿರುದ್ಧ ಪ್ರತಿಭಟಿಸಲು ಹಕ್ಕು ಇರುವುದಿಲ್ಲವೆಂದು ತಿಳಿಸಿದರು. ನಂತರ ಯಾವ ನೌಕರರ ಮೇಲೂ ನಾವು ಪಕ್ಷಪಾತ ಮಾಡುತ್ತಿಲ್ಲ. ಆದರೆ ನಗರಸಭೆ ಆಡಳಿತ ನಿರ್ವಹಣೆಗೆ ತೊಂದರೆಯುಂಟು ಮಾಡಿ ಸಾರ್ವಜನಿಕ ಕೆಲಸ ಕಾರ್ಯಗಳಿಗೆ ಅಡ್ಡಿಪಡಿಸುವ ವ್ಯಕ್ತಗಳಾಗಲೀ ನೌಕರರಾಗಲೀ ಸಂಘ ಸಂಸ್ಥೆಗಳ ಪದಾಧಿಕಾರಿಗಳೇ ಆಗಲೀ ಅಂತಹವರ ಮೇಲೆ ಎಸ್ಮಾ ಜಾರಿ ಮಾಡಿ ಕ್ರಿಮಿನಲ್ ಮೊಖದ್ದಮೆ ಹೂಡುವುದೆಂದು ಸೂಚಿಸಿದರು ಇವರ ಸೂಚನೆಯನ್ನು ಸದಸ್ಯರಾದ ಶ್ರೀ.ಶಂಕರೇಗೌಡರವರು ಅನುಮೋದಿಸಿದರು.

ಸದಸ್ಯರಾದ ಶ್ರೀ.ಶಂಕರೇಗೌಡರವರು, ಶ್ರೀಮತಿ: ಆಯಿಷಾ ತಬಸೂಂರವರು ಮತ್ತು ಶ್ರೀ.ಟಿ.ಎನ್. ಶಂಕರೇ ಗೌಡ ರವರು ಗುತ್ತಿಗೆದಾರರನ್ನು ಕರೆಸಿ ನೈರ್ಮಲ್ಯ ಕಾಮಗಾರಿಯನ್ನು ಅವರ ಕಾರ್ಮಿಕರು ನಿರ್ವಹಿಸದೇ ಹೋದ ಪಕ್ಷದಲ್ಲಿ ಪರ್ಯಾಯ ವ್ಯವಸ್ಥೆ ಮಾಡುವಂತೆ ಸೂಚಿಸಿದರು.

ಸದಸ್ಯರಾದ ನಾಗೇಂದ್ರ ರವರು ಮಾತನಾಡಿ ಪೌರಕಾರ್ಮಿಕರ ಮೇಲೆ ನಮಗೆ ಸಹಾನುಭೂತಿ ಇದೆ.. ಮಾನ್ಯ ಜೆ.ಡಿ.ಎಸ್.ಸದಸ್ಯರು ಮಾನ್ಯ ಶಾಸಕರ ಮಾರ್ಗದರ್ಶನದಂತೆ ವರ್ತಿಸುತ್ತಿರುತ್ತಾರೆಂದ ಕೂಡಲೇ ಸದಸ್ಯರಾದ ಶ್ರೀಮತಿ: ನಾಗಮ್ಮರವರು ಮತ್ತು ಇತರೆ ಸದಸ್ಯರುಗಳಾದ ಶ್ರೀ.ಎಂ.ಜೆ.ಚಿಕ್ಕಣ್ಣರವರು, ಶ್ರೀ.ಎಸ್.ಪಿ.ಗೌರೀಶ್‌ರವರು, ಶ್ರೀ.ಎಂ.ಪಿ.ಅರುಣ್ ಕುಮಾರ್‌ರವರು, ಶ್ರೀಮತಿ: ವಿ.ಎಂ.ಪದ್ಮಾವತಿರವರು, ಶ್ರೀ.ಜಿ.ಸಿ.ನಾಗರಾಜುರವರು, ಶ್ರೀಮತಿ: ಬಿ.ಎನ್.ಸವಿತಾರವರು, ಶ್ರೀಮತಿ:ಕೆ.ಎಲ್.ಶಾರದಮ್ಮರವರು ಮತ್ತು ಶ್ರೀ.ಎಸ್.ಪಿ.ಶ್ರೀಧರ್ ಇವರುಗಳು ಸಭೆಯಿಂದ ನಿರ್ಗಮಿಸಿದರು.

ಸದಸ್ಯರಾದ ಶ್ರೀ.ಹೆಚ್.ಸಿ.ಬೋರೇಗೌಡರವರು ಕಾನೂನು ರೀತ್ಯಾ ಅವಕಾಶವಿದ್ದಲ್ಲಿ ಕಾರ್ಮಿಕರಿಗೆ ವೇತನ ಹೆಚ್ಚಿಸಲು ತಿಳಿಸಿದರು.

ಅಂತಿಮವಾಗಿ, ಎಲ್ಲಾ ನಗರಸಭಾ ಸದಸ್ಯರುಗಳಿಗೂ ಸ್ವಚ್ಛತಾ ಗುತ್ತಿಗೆ ಕಾರ್ಮಿಕರ ಮೇಲೆ ಸಹಾನುಭೂತಿ ಇದೆ. ಆದರೆ ನಗರಸಭೆಯು ಖಾಸಗಿ ಗುತ್ತಿಗೆದಾರರಿಗೆ ನಿಯಮಾನುಸಾರ ಷರತ್ತುಗಳನ್ನು ವಿಧಿಸಿ ಕಾರ್ಯಾದೇಶ ನೀಡಲಾಗಿದ್ದು, ಈ ಷರತ್ತುಗಳನ್ವಯ ನೈರ್ಮಲ್ಯ ಕಾಮಗಾರಿ ಗುತ್ತಿಗೆದಾರರು ತಮ್ಮಲ್ಲಿರುವ ಕಾರ್ಮಿಕರಿಗೆ ವೇತನ ನೀಡಿ ಸ್ವಚ್ಛತಾ ಕೆಲಸ ಮಾಡಿಸಬೇಕಾಗಿರುತ್ತದೆ. ಈಗ ಕಾರ್ಮಿಕರಿಗೆ ದಿನಕ್ಕೆ ರೂ.101–50 ಪೈಸೆಗಳನ್ನು ಗುತ್ತಿಗೆದಾರರು ನೀಡುತ್ತಿದ್ದಾರೆ. ಮುಷ್ಕರ ನಿರತ ಕಾರ್ಮಿಕರ ಕೋರಿಕೆಯಂತೆ 120–00 ರೂಪಾಯಿಗಳಿಗೆ ವೇತನ ಹೆಚ್ಚಿಸಿ ಪಾವತಿಸಲು ನಗರಸಭೆ ಹಂತದಲ್ಲಿ ಕ್ರಮ ಕೈಗೊಳ್ಳಲು ಸಾಧ್ಯವಿರುವುದಿಲ್ಲವಾದ್ದರಿಂದ ಇವರ ಮನವಿ ಬಗ್ಗೆ ಸೂಕ್ತ ಕ್ರಮಕ್ಕಾಗಿ ಹಾಗೂ ಆದೇಶಕ್ಕಾಗಿ ಕೋರಿ ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರುರವರಿಗೆ ಪ್ರಸ್ತಾವನೆ ಸಲ್ಲಿಸುವುದೆಂದು ಹಾಗೂ ಸದರಿ ಪ್ರಸ್ತಾವನೆ ಸಂಬಂಧ ಆದೇಶ ಬರುವವರೆವಿಗೂ ಹಾಲಿ ನೈರ್ಮಲ್ಯ ಕೆಲಸ ನಿರ್ವಹಿ ಸುತ್ತಿರುವ ಗುತ್ತಿಗೆದಾರರಿಗೆ ನೋಟೀಸ್ ಜಾರಿ ಮಾಡಿ ಸ್ವಚ್ಛತಾ ಕೆಲಸ ಮಾಡಿಸಲು ಸೂಚಿಸುವುದು. ಅವರು ಎಷ್ಟು ಜನ ಕಾರ್ಮಿಕರನ್ನು ಕಳುಹಿಸು ತ್ತಾರೋ ಅಷ್ಟು ಜನರಿಗೆ ಮಾತ್ರ ಬಿಲ್ ಪಾವತಿಸುವುದು ಮತ್ತು ಹಾಲಿ ಇರುವ ನಗರಸಭೆ ಪೌರಕಾರ್ಮಿಕರಿಂದ ಎಲ್ಲಾ ವಾರ್ಡ್‌ಗಳಲ್ಲಿನ ನೈರ್ಮಲ್ಯ ಕೆಲಸವನ್ನು ನಿರ್ವಹಿಸುವುದೆಂದು ಸಭೆಯು ಒಪ್ಪಿ ತೀರ್ಮಾನಿಸಲಾಯಿತು.

ಸಹಿ:
(ಜಿ.ಎಸ್.ನಾಗಮಣಿ),
ಅಧ್ಯಕ್ಷರು,
ನಗರಸಭೆ, ಮಂಡ್ಯ.

"ನಕಲು"

ಪೌರಾಯುಕ್ತರು,
ನಗರಸಭೆ, ಮಂಡ್ಯ.